


ಟೀಚರ್: ಬಂಟಾ, ಸೀನಿಯರ್ಸ್‌ಗೂ, ಜೂನಿಯರ್ಸ್‌ಗೂ ಇರುವ ವ್ಯತ್ಯಾಸ ಏನು?

ಬಂಟಾ: ಸಮುದ್ರ ಹತ್ತಿರ ವಾಸ ಮಾಡುವವನು ಸೀ–ನಿಯರ್, ಮೃಗಾಲಯದ ಹತ್ತಿರ ವಾಸ ಮಾಡುವವನು ಜೂ–ನಿಯರ್.



★★★

ಮಂಟಾ: ಡಾಕ್ಟ್ರೇ, ದೀರ್ಘಕಾಲ ಬದುಕಲು ಏನು ಮಾಡಬೇಕು?

ವೈದ್ಯರು: ಮದುವೆ ಆಗಿಬಿಡು!

ಮಂಟಾ: ವಾಹ್! ಅಷ್ಟೇನಾ! ನನಗಿದು ಗೊತ್ತೇ ಇರಲಿಲ್ಲ. ಮದ್ವೆಯಿಂದ ಇಷ್ಟೊಂದು ಸಹಾಯ ಆಗುತ್ತಾ?

ವೈದ್ಯರು: ಹಾಗೇನಿಲ್ಲ! ಮುಂದೆ ಅಂಥಾ ಆಲೋಚನೆ ಬರಲ್ಲ ಅಷ್ಟೆ.



★★★

ಮಂಟಾನಿಗೆ ಒಂದು ಪಾರಿವಾಳ ತುಂಬಾ ತೊಂದರೆ ಕೊಡುತ್ತಿತ್ತು. ಮಂಟಾ ಅದನ್ನು ಕಷ್ಟಪಟ್ಟು ಹಿಡಿದು, ಕ್ರೂರವಾಗಿ ಸಾಯಿಸಲು ನಿರ್ಧರಿಸಿದ.

ಅದಕ್ಕಾಗಿ ಇಪ್ಪತ್ತು ಅಂತಸ್ತಿನ ಬಹುಮಹಡಿ ಕಟ್ಟಡದ ತುದಿಗೆ ಹೋಗಿ ಅಲ್ಲಿಂದ ಪಾರಿವಾಳವನ್ನು ಕೆಳಕ್ಕೆ ಎಸೆದ.

★★★



ಫ್ಯಾಷನ್ ಚಾನಲ್ ನೋಡ್ತಾ ಮಗ ಅಪ್ಪನ್ನ ಕೇಳಿದ.

'ಯಾಕಪ್ಪಾ, ಅವರೆಲ್ಲಾ ಇಷ್ಟು ಚಿಕ್ಕ ಬಟ್ಟೆ ಹಾಕ್ಕೊಂಡಿದ್ದಾರೆ?'

ಅಪ್ಪ: ಅವರೆಲ್ಲಾ ಬಡುವ್ರು ಮಗಾ, ಅವರಿಗೆ ಅಷ್ಟೆ ಬಟ್ಟೆ ಇರೋದು. ನೀನು ಟಿ.ವಿ. ಆಫ್ ಮಾಡಿ ಮಲಕ್ಕೊ ಹೋಗು.'

ಮಗ: ಬೇಡಪ್ಪಾ, ಇನ್ನೂ ಸ್ವಲ್ಪ ಹೊತ್ತು ನೋಡತೀನಿ ಮುಂದೆ ಇವರಿಗಿಂತಲೂ ಬಡವರು ಬರಬಹುದು.

–ಇಂದು